# Third Semester of 3 Year LL.B. Examination, January 2011
## LABOUR LAW (Course – II)

Duration : 3 Hours                                                                 Max. Marks : 100

**Instructions :** 1. Answer **all** questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answers should be written **either** in English or Kannada **completely**.

### UNIT – I

Q. No. 1. (a) What is 'Industrial Dispute' ? Explain the essential requisites of industrial dispute. Marks : 15

'ಕೈಗಾರಿಕಾ ವಿವಾದ' ಎಂದರೇನು ? ಕೈಗಾರಿಕಾ ವಿವಾದದ ಮುಖ್ಯಾಂಶಗಳನ್ನು ವಿವರಿಸಿ.

OR/ಅಥವಾ

Explain the factors which were responsible for departure from the old theory of 'Master and Servant'.

'ಯಜಮಾನ ಮತ್ತು ಸೇವಕ' ಪ್ರಾಚೀನ ಸಿದ್ಧಾಂತದಿಂದ ನಿರ್ಗಮಿಸಲು ಕಾರಣವಾದ ಅಂಶಗಳನ್ನು ವಿವರಿಸಿ.

(b) 'A' was employed as <u>Mason</u> in a company and drawing wages of Rs. 2,500 per month. His duties involved supervisory work of about 100 workmen. He also used to decide who should do over time work. Is 'A' a workman ? Decide giving reason. Marks : 5

'ಎ' ಎಂಬುವವನು ಒಂದು ಕಂಪನಿಯಲ್ಲಿ ಮೇಸ್ತ್ರಿಯಾಗಿ ನೇಮಕವಾಗಿದ್ದು ತಿಂಗಳಿಗೆ 2,500 ರೂ.ಗಳನ್ನು ವೇತನವಾಗಿ ಪಡೆಯುತ್ತಿದ್ದನು. ಅವನದು ಉಸ್ತುವಾರಿ ಕೆಲಸವಾಗಿದ್ದು 100 ಜನ ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದನು ಹಾಗೂ ಯಾರು ಹೆಚ್ಚಿನ ವೇಳೆ ಕೆಲಸ ಮಾಡಬೇಕೆಂಬುದನ್ನು ಅವನು ತೀರ್ಮಾನಿಸುತ್ತಿದ್ದನು. 'ಎ'ಯು ಕಾರ್ಮಿಕನೆ ? ಕಾರಣ ಸಹಿತ ತೀರ್ಮಾನಿಸಿ.

OR/ಅಥವಾ

Staying away from work under common understanding as a protest to the introduction of a new system for marking attendance of the workmen. Does this amount to strike ? Give reason.

ಕಾರ್ಮಿಕರು ಹಾಜರಾತಿಯನ್ನು ಹಾಕಲು ಹೊಸ ಪದ್ಧತಿಯನ್ನು ಅನುಷ್ಠಾನಗೊಳಿಸಿದ್ದಕ್ಕಾಗಿ ಒಮ್ಮತದಿಂದ ಕೆಲಸದಿಂದ ದೂರ ಇರುವಿಕೆ – ಮುಷ್ಕರ ಎನಿಸಿಕೊಳ್ಳುತ್ತದೆಯೇ ? ಕಾರಣ ಕೊಡಿ.

## UNIT – II

Q. No. 2. (a) Discuss briefly the Authorities set up for the investigation and settlement of 'industrial disputes'. Marks : 15

ಕೈಗಾರಿಕಾ ವಿವಾದಗಳನ್ನು ತನಿಖೆ ಮಾಡಲು ಮತ್ತು ತೀರ್ಮಾನಿಸಲು ಸೃಷ್ಟಿಸಲಾಗಿರುವ ಅಧಿಕಾರಗಳ ಬಗ್ಗೆ ಚರ್ಚಿಸಿ.

OR/ಅಥವಾ

"Conditions of service etc. should not be changed by the employer during pendency of proceeding before the authorities under the Industrial Disputes Act". Explain the extent of this provision.

''ಅಧಿಕಾರಗಳ ಮುಂದೆ ವ್ಯವಹರಣೆಗಳು ಜಾರಿಯಲ್ಲಿರುವಾಗ ಕಾರ್ಮಿಕರ ಸೇವಾ ಷರತ್ತು ಮುಂತಾದವುಗಳನ್ನು ಮಾಲೀಕನು ಬದಲಿಸಬಾರದು''. ಈ ಉಪಬಂಧದ ವ್ಯಾಪ್ತಿಯನ್ನು ವಿವರಿಸಿರಿ.

(b) On account of strike by some workman in one part of the establishment, management refused to give work to the workmen in another part of the establishment. The workmen claim lay-off compensation. Decide giving reason whether they are entitled for compensation ? Marks : 5

ಒಂದು ಭಾಗದಲ್ಲಿನ ಕಾರ್ಮಿಕ ಮುಷ್ಕರದಿಂದಾಗಿ ಮಾಲೀಕನು ಮತ್ತೊಂದು ಭಾಗದ ಉದ್ದಿಮೆಯಲ್ಲಿ ಕಾರ್ಮಿಕರಿಗೆ ಕೆಲಸ ಕೊಡಲು ನಿರಾಕರಿಸಿದನು. ಆ ಕಾರ್ಮಿಕರು ಉದ್ಯೋಗಬಂಧಿ ಪರಿಹಾರ ಕೇಳುತ್ತಾರೆ. ಅವರು ಉದ್ಯೋಗಬಂಧಿ ಪರಿಹಾರ ಪಡೆಯಲು ಅರ್ಹರೆ ? ಕಾರಣ ಸಹಿತ ತೀರ್ಮಾನಿಸಿ.

OR/ಅಥವಾ

In an industry there was continuous unrest leading to strikes and lockouts. The employer closed down the industry. Does this amount to closure ? Give reasons.

ಒಂದು ಕೈಗಾರಿಕೆಯಲ್ಲಿ ನಿರಂತರ ಗಲಾಟೆಯು ಮುಷ್ಕರ ಮತ್ತು ಬೀಗಮುದ್ರೆಗಳಿಗೆ ದಾರಿಮಾಡಿಕೊಡುತ್ತಿತ್ತು. ಮಾಲೀಕನು ಕೈಗಾರಿಕೆಯನ್ನು ಮುಚ್ಚಿದನು. ಇದು ಕೈಗಾರಿಕೆಯ ಮುಚ್ಚುವಿಕೆ ಎನಿಸಿಕೊಳ್ಳುತ್ತದೆಯೇ ? ಕಾರಣ ಕೊಡಿ.

## UNIT – III

Q. No. 3. (a) Explain the provisions regarding registration of trade unions under the Trade Unions Act, 1926. Marks : 15

1926ರ ವೃತ್ತಿಸಂಘಗಳ ಕಾಯಿದೆಯಡಿಯಲ್ಲಿ ನೋಂದಣಿಯ ಬಗ್ಗೆ ಇರುವ ಉಪಬಂಧಗಳನ್ನು ವಿವರಿಸಿ.

OR/ಅಥವಾ

Discuss the liability of the employer to pay compensation under the Workmen Compensation Act.

ಕಾರ್ಮಿಕ ಪರಿಹಾರ ಅಧಿನಿಯಮದನ್ವಯ ಮಾಲೀಕರ ಪರಿಹಾರ ನೀಡುವ ಬಾಧ್ಯತೆಯನ್ನು ಚರ್ಚಿಸಿರಿ.

(b) 'A' workman residing in a hut provided by the employer. The hut caught fire on a night and the workman sustained severe burn injuries consequent upon which his earning capacity was reduced. Can he claim compensation from the employer ? Give reason. Marks : 5

ಒಬ್ಬ ಕಾರ್ಮಿಕ ಮಾಲೀಕನು ಕೊಟ್ಟಿದ್ದ ಗುಡಿಸಲಿನಲ್ಲಿ ವಾಸವಾಗಿದ್ದನು. ಒಂದು ದಿನ ರಾತ್ರಿ ಗುಡಿಸಲಿಗೆ ಬೆಂಕಿ ಬಿದ್ದ ಕಾರಣ ಅವನಿಗೆ ತೀವ್ರ ಸುಟ್ಟ ಗಾಯಗಳಾಗಿ ಅವನ ದುಡಿಮೆ ಶಕ್ತಿಯು ಕ್ಷೀಣಿಸಿತು. ಅವನು ಮಾಲೀಕನಿಂದ ಪರಿಹಾರ ಕೇಳಬಹುದೇ ? ಕಾರಣ ಕೊಡಿ.

OR/ಅಥವಾ

A bomb was placed in the premises of a workshop by some strangers, exploded and injured a workman. Is the employer liable to pay compensation ? Decide.

ಒಂದು ಕಾರ್ಯಾಗಾರದ ಆವರಣದಲ್ಲಿ ಅಪರಿಚಿತರು ಇಟ್ಟ ಬಾಂಬಿನ ಸ್ಫೋಟದಿಂದಾಗಿ ಒಬ್ಬ ಕಾರ್ಮಿಕನಿಗೆ ಗಾಯವಾಯಿತು. ಮಾಲೀಕನು ಇದಕ್ಕೆ ಪರಿಹಾರ ನೀಡಲು ಜವಾಬ್ದಾರನೇ ? ತೀರ್ಮಾನಿಸಿ.

## UNIT – IV

Q. No. 4. (a) Examine the different kinds of benefits available under Employees State Insurance Act, 1948. Marks : 15

1948ರ ಕಾರ್ಮಿಕರ ರಾಜ್ಯ ವಿಮಾ ಕಾಯಿದೆಯಡಿಯಲ್ಲಿ ದೊರೆಯುವ ವಿವಿಧ ಪ್ರಯೋಜನಗಳನ್ನು ಪರಿಶೀಲಿಸಿರಿ.

OR/ಅಥವಾ

Discuss the provisions relating to contributions under Employees State Insurance Act.

ಕಾರ್ಮಿಕರ ರಾಜ್ಯ ವಿಮಾ ಕಾಯಿದೆಯಡಿಯಲ್ಲಿ ವಂತಿಗೆಗಳ ಬಗ್ಗೆ ಇರುವ ಉಪಬಂಧಗಳನ್ನು ಚರ್ಚಿಸಿರಿ.

(b) A demand made by the Regional Provident Fund Commissioner to the employer to contribute his share in respect of those employees who have completed one year's service on the date. Is it justified ? Decide. Marks : 5

ಪ್ರಾಂತೀಯ ಭವಿಷ್ಯನಿಧಿ ಆಯುಕ್ತರು, ಆ ದಿನಾಂಕಕ್ಕೆ ಒಂದು ವರ್ಷದ ಸೇವೆಯನ್ನು ಮುಗಿಸಿರುವ ಕಾರ್ಮಿಕರ ಆ ಅವಧಿಯ ಮಾಲೀಕರ ಪಾಲಿನ ಭವಿಷ್ಯನಿಧಿ ವಂತಿಗೆಯನ್ನು ನೀಡುವಂತೆ ಮಾಲೀಕರನ್ನು ಒತ್ತಾಯಿಸುತ್ತಾರೆ. ಇದು ಸಮರ್ಥನೀಯವೇ? ತೀರ್ಮಾನಿಸಿ.

OR/ಅಥವಾ

Write note on payment of maternity benefit to the women under Maternity Benefit Act.

ಹೆರಿಗೆ ಭತ್ಯೆ ಕಾಯಿದೆಯಡಿಯಲ್ಲಿ, ಮಹಿಳೆಯರಿಗೆ ಹೆರಿಗೆ ಭತ್ಯೆ ನೀಡುವುದರ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain the term 'Minimum Wage'. What is the procedure laid down under the Minimum Wages Act for fixation of minimum rate of wages ? Marks : 15

'ಕನಿಷ್ಠ ವೇತನ' ಪದವನ್ನು ವಿವರಿಸಿ. ಕನಿಷ್ಠ ವೇತನ ದರ ನಿಗದಿಗೊಳಿಸುವ ಸಲುವಾಗಿ ಕನಿಷ್ಠ ವೇತನ ಕಾಯಿದೆಯಡಿಯಲ್ಲಿ ಯಾವ ಪ್ರಕ್ರಿಯೆಯನ್ನು ಅಳವಡಿಸಲಾಗಿದೆ ?

OR/ಅಥವಾ

Discuss the provisions relating to 'Health' under the Factories Act, 1948.

1948ರ ಕಾರ್ಖಾನೆ ಕಾಯಿದೆಯಡಿಯಲ್ಲಿ 'ಆರೋಗ್ಯಕ್ಕೆ' ಸಂಬಂಧಿಸಿದ ಉಪಬಂಧಗಳನ್ನು ಚರ್ಚಿಸಿ.

(b) A person employed as a Carpenter in a Soap Manufacturing Factory for preparing boxes in which soaps are packed and sent for sale. Is he a worker under the Factories Act ? Decide. Marks : 5

ಒಂದು ಸಾಬೂನು ಕಾರ್ಖಾನೆಯಲ್ಲಿ ಒಬ್ಬ ಬಡಗಿಯನ್ನು ಮರದ ಪೆಟ್ಟಿಗೆಗಳನ್ನು ತಯಾರಿಸಲು ನೇಮಕ ಮಾಡಿಕೊಳ್ಳಲಾಗಿದ್ದು, ತಯಾರಿಸಿದ ಸಾಬೂನುಗಳನ್ನು ಪೆಟ್ಟಿಗೆಗಳಲ್ಲಿ ತುಂಬಿ ಮಾರಾಟಕ್ಕೆ ಕಳುಹಿಸುತ್ತಾರೆ. ಕಾರ್ಖಾನೆಗಳ ಕಾಯಿದೆಯಡಿಯಲ್ಲಿ ಈತನು ಕೆಲಸಗಾರನೇ ? ತೀರ್ಮಾನಿಸಿ.

OR/ಅಥವಾ

Write note on the essential features of Contract Labour (Regulation and Abolition) Act, 1970.

1970 ರ ಕರಾರು ಕಾರ್ಮಿಕ (ನಿಯಂತ್ರಣ ಮತ್ತು ರದ್ದತಿ) ಕಾಯಿದೆಯ ಅವಶ್ಯಕ ಲಕ್ಷಣಗಳ ಬಗ್ಗೆ ಟಿಪ್ಪಣಿ ಬರೆಯಿರಿ.